ಓ.ಎಸ್. 43/2022, ಪಿ.ಡಬ್ಲೂ-1 ಹೆಸರುಃ ಎನ್.ಸೌಭಾಗ್ಯ

**ದಿಃ24-02-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : 1 ನೇ ಪ್ರತಿವಾದಿಯ ಪರ ಶ್ರೀ ಜಿ.ಸಿ. ವಕೀಲರಿಂದಃ**

ನನ್ನ ತಂದೆಯ ಹೆಸರು ನಾರಪ್ಪ. ನನ್ನ ತಂದೆಯ ತಂದೆಯ ಹೆಸರು ವೀರಭದ್ರಪ್ಪ. ವೀರಭದ್ರಪ್ಪರವರ ತಂದೆಯ ಹೆಸರು ನಂಜಪ್ಪ. ವೀರಭದ್ರಪ್ಪರವರ ತಂದೆಯ ಹೆಸರು ನಂಜಪ್ಪ ಅಲ್ಲ ನಾರಪ್ಪ ಎಂದರೆ ಗೊತ್ತಿಲ್ಲ. ನನ್ನ ತಂದೆ ಯಾವ ದಿನಾಂಕದಂದು ಮೃತಪಟ್ಟಿರುತ್ತಾರೆ ಎಂದು ಗೊತ್ತಿಲ್ಲ. ನನ್ನ ತಂದೆಯ ಮರಣಾ ನಂತರ ನಮ್ಮ ಕುಟುಂಬದ ವ್ಯವಹಾರಣೆಯನ್ನು 1 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು. ನನ್ನ ತಂದೆಯ ಮರಣಾ ನಂತರ ನನ್ನ ತಾಯಿ ಕುಟುಂಬದ ನಿರ್ವಹಣೆಯನ್ನು ಮಾಡುತ್ತಿದ್ದರು ಎಂದು ವಾದ ಪತ್ರದಲ್ಲಿ ಹೇಳಿಲ್ಲ. ನನ್ನ ತಂದೆ ಸರ್ಕಾರಿ ನೌಕರರಾಗಿದ್ದರು ಎಂದರೆ ಸರಿ. ನನ್ನ ತಂದೆ ಸೇವೆಯಲ್ಲಿ ಅವಧಿಯಲ್ಲಿಯೇ ಮೃತಪಟ್ಟಿದ್ದ ಕಾರಣ 1 ನೇ ಪ್ರತಿವಾದಿಗೆ ನನ್ನ ತಂದೆಯ ಮರಣದ ಕುರಿತಾಗಿ ಅನುಕಂಪದ ಆಧಾರದಲ್ಲಿ ನೌಕರಿಯನ್ನು ಕೊಟ್ಟಿದ್ದರು ಎಂದರೆ ಸರಿ.

2. ನನ್ನ ಅಜ್ಜ ವೀರಭದ್ರಪ್ಪ ರವರಿಗೆ ನಾರಪ್ಪ, ಚಿಕ್ಕೀರಪ್ಪ, ಕಮಲಮ್ಮ ಮತ್ತು ಗೌರಮ್ಮ ಎಂಬ ನಾಲ್ಕು ಮಂದಿ ಮಕ್ಕಳು. ವೀರಭದ್ರಪ್ಪನವರ ತಂದೆಯಾದ ನಾರಪ್ಪ ರವರಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ನಾರಪ್ಪರವರಿಗೆ ವೀರಭದ್ರಪ್ಪ ಮತ್ತು ಚಿಗಟೇರಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ವೀರಭದ್ರಪ್ಪರವರಿಗೆ ನಾರಪ್ಪ ಒಬ್ಬರೇ ಮಗ ಎಂದರೆ ಸರಿಯಲ್ಲ. ನನ್ನ ಅಜ್ಜನಾದ ವೀರಭದ್ರಪ್ಪರವರು ವ್ಯವಸಾಯ ಮಾಡುತ್ತಿದ್ದರು. 2 ನೇ ವಾದಿ ಮತ್ತು 1 ನೇ ಪ್ರತಿವಾದಿಯ ವಿವಾಹ ಒಟ್ಟಿಗೆ ಆಗಿತ್ತು ಎಂದರೆ ಸರಿ. 1 ನೇ ಪ್ರತಿವಾದಿ ಸರ್ಕಾರಿ ಕೆಲಸದಲ್ಲಿ ಇದ್ದಾಗ್ಯೂ ಸಹ ಊರಿನಲ್ಲಿಯೇ ಇದ್ದರು. ವ್ಯವಸಾಯದ ಕೆಲಸವನ್ನು 1 ನೇ ಪ್ರತಿವಾದಿ ಮತ್ತು ಆತನ ತಮ್ಮ ಒಟ್ಟಿಗೆ ಮಾಡಿಕೊಂಡು ಹೋಗುತ್ತಿದ್ದರು ಎಂದರೆ ಸರಿ. 2 ನೇ ಪ್ರತಿವಾದಿಯ ವಿವಾಹ ಯಾವ ವರ್ಷದಲ್ಲಿ ಆಗಿರುತ್ತದೆ ಎಂದು ನೆನಪಿಲ್ಲ. 2 ನೇ ಪ್ರತಿವಾದಿಯ ವಿವಾಹದ ಸಮಯದಲ್ಲಿ ನನ್ನ ತಾಯಿ ಬದುಕಿದ್ದರು. 1 ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿನ ಅಂಶಗಳ ಕುರಿತು ನನಗೆ ಗೊತ್ತಿಲ್ಲ.

3. ದಾವಾ ಅನುಸೂಚಿತ 4 ರಿಂದ 7, 10 ಮತ್ತು 14 ನೇ ಖಂಡಿಕೆ ಸ್ವತ್ತುಗಳು ನನ್ನ ತಂದೆಯಾದ ನಾರಪ್ಪ ರವರಿಗೆ ದಿನಾಂಕ 16.03.1950 ರ ನೊಂದಣಿ ದಾನ ಪತ್ರದಂತೆ ಬಂದಿರುತ್ತದೆ ಎಂದರೆ ಸರಿ. ಈ ಎಲ್ಲಾ ಸ್ವತ್ತುಗಳು ವೀರಭದ್ರಪ್ಪ ಬಿನ್ ನಾರಪ್ಪರವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿ. ಈ ಮೇಲ್ಕಂಡ ಸ್ವತ್ತುಗಳನ್ನು ನನ್ನ

ತಂದೆ ಮಾತ್ರ ಅನುಭವಿಸಿಕೊಂಡು ಬಂದಿದ್ದರು ಎಂದರೆ ಸರಿ. ನನ್ನ ತಂದೆಯ ಮರಣಾ ನಂತರ ದಾವಾ ಅನುಸೂಚಿತ 4 ರಿಂದ 7, 10 ಮತ್ತು 14 ನೇ ಖಂಡಿಕೆಯ ಸ್ವತ್ತುಗಳ ಖಾತೆಯು ಎಂ.ಆರ್. ನಂ.54/1992-93 ರಂತೆ 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ ಖಾತೆ ಏರ್ಪಟ್ಟಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿತ 4 ರಿಂದ 7, 10 ಮತ್ತು 14 ನೇ ಖಂಡಿಕೆಯ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳಲ್ಲ ಎಂದರೆ ಸರಿ.

4. ನನ್ನ ಅಜ್ಜನಾದ ವೀರಭದ್ರಪ್ಪರವರಿಗೆ ಚಿಗಟೇರಪ್ಪ ಎಂಬ ತಮ್ಮ ಇದ್ದು, ಸದರಿರವರು ಅವಿವಾಹಿತರಾಗಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ದಾವಾ ಅನುಸೂಚಿತ 11 ರಿಂದ 13 ನೇ ಖಂಡಿಕೆಯ ಸ್ವತ್ತುಗಳು ಚಿಗಟೇರಪ್ಪ ರವರಿಗೆ ಸೇರಿದ ಸ್ವತ್ತುಗಳು ಎಂದರೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ನಾನು ಚಿಗಟೇರಪ್ಪ ರವರನ್ನು ನೋಡಿಲ್ಲ ಎಂದು ಹೇಳುತ್ತಾರೆ. ಚಿಗಟೇರಪ್ಪರವರು ಅವಿವಾಹಿತರಾಗಿದ್ದ ಕಾರಣ ನನ್ನ ಅಜ್ಜನಾದ ವೀರಭದ್ರಪ್ಪರವರೊಂದಿಗೆ ವಾಸಿಸುತ್ತಿದ್ದರು ಎಂದರೆ ಗೊತ್ತಿಲ್ಲ. ಚಿಗಟೇರಪ್ಪ ರವರ ಹೆಸರಿನಲ್ಲಿ ಇದ್ದ ಮೇಲ್ಕಂಡ ಸ್ವತ್ತುಗಳ ಕುರಿತು ಸದರಿರವರೆ ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಗೊತ್ತಿಲ್ಲ. ಸದರಿ ಸ್ವತ್ತುಗಳು ಸಹ ಚಿಗಟೇರಪ್ಪರವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಗೊತ್ತಿಲ್ಲ. ಮೇಲ್ಕಂಡ ಚಿಗಟೇರಪ್ಪರವರ ಮರಣದ ಕಾರಣದಿಂದ 11 ರಿಂದ 13 ನೇ ಖಂಡಿಕೆಯ ಸ್ವತ್ತುಗಳ ಖಾತೆ ಎಂ.ಆರ್.54/92-93 ರಂತೆ 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ ಏರ್ಪಟ್ಟಿರುತ್ತದೆ ಎಂದರೆ ಗೊತ್ತಿಲ್ಲ.

5. ದಾವಾ ಅನುಸೂಚಿತ 1 ಮತ್ತು 2 ನೇ ಖಂಡಿಕೆಯ ಸ್ವತ್ತುಗಳನ್ನು ನನ್ನ ತಂದೆ ನೋಂದಣಿ ಕ್ರಯಪತ್ರದಂತೆ ಖರೀದಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆ ಶಿಕ್ಷಕರಾಗಿದ್ದು, ಸದರಿ ಆದಾಯದಿಂದ ನೊಂದಣಿ ಕ್ರಯಪತ್ರದಂತೆ ಖರೀದಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆಯ ಮರಣಾ ನಂತರ ಮೇಲ್ಕಂಡ ಸ್ವತ್ತುಗಳ ಖಾತೆ 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ ಎಂ.ಆರ್.54/92-93 ರಂತೆ ಖಾತೆ ಏರ್ಪಟ್ಟಿರುತ್ತದೆ ಎಂದರೆ ಗೊತ್ತಿಲ್ಲ. ದಾವಾ ಅನುಸೂಚಿತ 3 ನೇ ಖಂಡಿಕೆಯ ಸ್ವತ್ತನ್ನು 2 ನೇ ಪ್ರತಿವಾದಿಯ ಹೆಸರಿನಲ್ಲಿ ದಿನಾಂಕ 04.03.1991 ರಂದು ನೋಂದಣಿ ಕ್ರಯಪತ್ರದಂತೆ ಖರೀದಿಸಿರುತ್ತಾರೆ ಎಂದರೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ